# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

## ಸಿ. ಸಿ. ನಂ.1223/2022

| ಹೆಸರು ಶ್ರೀ/ಶ್ರೀಮತಿ | ಶಿವಶರಣಪ್ಪ | ಸಿಡಬ್ಲ್ಯೂ-7 | ಪಿಡಬ್ಲ್ಯೂ-8 |
|---|---|---|---|
| ತಂದೆಯ/ಗಂಡನ ಹೆಸರು | ದೂಳಪ್ಪ | | |
| ವಯಸ್ಸು | 50 ವರ್ಷ | | |
| ಉದ್ಯೋಗ | ಎ.ಎಸ್.ಐ | | |
| ವಾಸ ಸ್ಥಳ | ಮಳಖೇಡ | | |

ದಿನಾಂಕ 11-07-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು 2020 ರಿಂದ ಮಳಖೇಡ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 11.10.2021 ರಂದು ನಾವು ಠಾಣೆಯಲ್ಲಿ ಇದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನನಗೆ ಮತ್ತು ಚಾಸಾ-8 ಮತ್ತು 9 ಹಾಗೂ ಪಂಚರಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಸುಮಾರು 06.20 ಗಂಟೆಗೆ ನೀಲಹಳ್ಳಿ ಗ್ರಾಮಕ್ಕೆ ಹೋಗಿದ್ದೇವು. ನಾವು ಅಲ್ಲೆ ಕಾಯುತ್ತಾ ಕುಳಿತ್ತಿದೇವು. ಸುಮಾರು 07.30 ಗಂಟೆಗೆ ಎರಡು ಲಾರಿ ಹೊರಟ್ಟಿದ್ದು, ಚಾಲಕರು ನಮ್ಮನ್ನು ನೋಡಿ ಲಾರಿ ನಿಲ್ಲಿಸಿ ಅಲ್ಲೆ ಬಿಟ್ಟು ಓಡಿ ಹೋಗಿರುತ್ತಾರೆ. ಲಾರಿಯ ನಂಬರ ನೋಡಿದ್ದು ಅದರ ನಂಬರ ಜಿಜೆ-36 ವ್ಹಿ-0723 ಅಂತಾ ಇದ್ದು ಅದರಲ್ಲಿ 50 ಕೆಜಿ ತೂಕದ 624 ಚೀಲ ಪಡಿತರ ಅಕ್ಕಿಗಳು ಇದ್ದವು. ಆಗ ಪಂಚರ ಸಮಕ್ಷಮ 1 ಚೀಲದಿಂದ 1 ಕೆಜಿಯಷ್ಟು 3 ಬ್ಯಾಗಳಲ್ಲಿ 3 ಕೆಜಿಯಷ್ಟು ಅಕ್ಕಿಯನ್ನು ಎಫ್.ಎಸ್.ಎಲ್. ವರದಿಯ ಕುರಿತು ತೆಗೆದಿರುತ್ತೇವೆ. ಇನ್ನೊಂದು ಲಾರಿ ಅದರ ಸಂ. ಜಿಜೆ-36 ಟಿ-4732 ಅಂತಾ ಇತ್ತು ಅದರಲ್ಲಿ 50 ಕೆಜಿ ತೂಕದ 624 ಚೀಲ ಪಡಿತರ ಅಕ್ಕಿ ಇತ್ತು. ಆಗ ಸದರಿ ವಾಹನದಿಂದ 3 ಕೆಜಿ ಅಕ್ಕಿಯನ್ನು ಶಾಂಪಲ ಸಲುವಾಗಿ ಪಡೆದುಕೊಂಡು ಪಂಚರ ಸಹಿವುಳ್ಳ ಚೀಟಿ ಅಂಟಿಸಿದ್ದು ಇರುತ್ತದೆ. ಒಂದು ಲಾರಿಯಲ್ಲಿ ಸರಿಸುಮಾರು 468000 ಮೌಲ್ಯದ ಅಕ್ಕಿ ಇತ್ತು ಎರಡು ಲಾರಿ ಸೇರಿಸಿ 935000 ಮೌಲ್ಯದ ಅಕ್ಕಿ ಇತ್ತು. ಪ್ರತಿ ಲಾರಿಯಿಂದ 3 ಕೆ.ಜಿಯಂತೆ, ಎರಡು ಲಾರಿಯಿಂದ ಒಟ್ಟು 6 ಕೆಜಿಯನ್ನು ಎಫ್.ಎಸ್.ಎಲ್.ಗಾಗಿ ಪಂಚರ ಸಮಕ್ಷಮ ಪಡೆದು ಕಳುಹಿಸಿರುತ್ತೇವೆ. ನಂತರ ಸ್ಥಳದಲ್ಲಿ 07.30 ರಿಂದ 09.00 ಗಂಟೆಯವರೆಗೆ ಪಂಚನಾಮೆಯನ್ನು ಬರೆದು ನಂತರ ಜಪ್ತುಪಡಿಸಿಕೊಂಡ 6 ಕೆಜಿ ಅಕ್ಕಿಯನ್ನು ನಮ್ಮ ಸಾಹೇಬರು ತಮ್ಮ ತಾಬಾಕ್ಕೆ ಪಡೆದುಕೊಂಡಿರುತ್ತಾರೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು

ನೋಡಿದರೆ ಗುರುತಿಸುತ್ತೇನೆ. ಘಟನೆಯ ಕುರಿತು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ. ಲಾರಿಗಳನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಮು.ಮಾ.ಗಳನ್ನು ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಬಿ. ಎಸ್. ಡಿ. ಆರೋಪಿತರ ಪರ ವಕೀಲರಿಂದ**

ನಾವು ಕರ್ತವ್ಯದಲ್ಲಿದ್ದಾಗ ಠಾಣೆಯಿಂದ ಹೊರಡಬೇಕಾದರೆ ದಿನಚರಿ ಪುಸ್ತಕ ಬರೆಯುತ್ತೇವೆ ಎಂದರೆ ಸರಿ. ಚಾಸಾ-1 ರವರಿಗೆ ಮಾಹಿತಿ ಬಂದ ಮೇರೆಗೆ ನಾವು ನೀಲಹಳ್ಳಿ ಗ್ರಾಮಕ್ಕೆ ಹೋಗಿರುವುದು ಸುಳ್ಳು ಎಂದರೆ ಸರಿಯಲ್ಲ. 06.20 ಗಂಟೆಯವರೆಗೆ ಲಾರಿಗಳಿಗಾಗಿ ನಾವು ಬಸ ನಿಲ್ದಾಣ ಹತ್ತಿರ ಕಾಯುತ್ತಾ ನಿಂತಿದ್ದೇವು. ಘಟನಾ ಸ್ಥಳದಲ್ಲಿ ಜಪ್ತಾದ ಸಮಯಕ್ಕೆ ನಮ್ಮನ್ನು ಬಿಟ್ಟರೆ ಯಾರು ಇರಲಿಲ್ಲ. ಘಟನೆ ಆದ ಸಮಯದಲ್ಲಿ ಕತ್ತಲೆ ಆಗಿತ್ತು. ವಾಹನದಲ್ಲಿ ನಿಖರವಾಗಿ ಚೀಲಗಳ ಸಂಖ್ಯೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿ ಲಾರಿಯಲ್ಲಿ 624 ಚೀಲಗಳು ಇರುತ್ತವೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 6 ಕೆ.ಜಿ. ಅಕ್ಕಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಲ್ಲ ಎಂದರೆ ಸರಿಯಲ್ಲ. ನಾವು ತಪಾಸಣೆಗೆ ಹೋಗಿಲ್ಲ, ಹಿರಿಯ ಅಧಿಕಾರಿಗಳ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳಿಗೆ ನನ್ನ ಹೇಳಿಕೆ ಕೊಟ್ಟಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ದಿವಸ ಪಂಚರ ಸಮಕ್ಷಮ ಪ್ರತಿ ಲಾರಿಯಿಂದ 3 ಕೆಜಿ ಪಡಿತರ ಅಕ್ಕಿಯನ್ನು ಶಾಂಪಲ ಸಲುವಾಗಿ ತೆಗೆದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿವಸ ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಯವರ ಮಾತುಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH